# Malnad Fest -2024



ಹಾಸನ - ದಿನಾಂಕ 6-5-2024 ರಂದು ಹಾಸನ ಮಲೆನಾಡು ಇಂಜಿನೀಯರಿಂಗ್ ಕಾಲೇಜಿನ ಹಾರನಹಳ್ಳಿ ರಾಮಸ್ವಾಮಿ ಸಭಾಂಗಣದಲ್ಲಿ ನಡೆದ 2024-ರ ಮಲ್ನಾಡು ಇಂಜಿನೀಯರಿಂಗ್ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಚಂದನ ಟಿವಿಯ ಥಟ್ ಅಂತ ಹೇಳಿ **ಕಾರ್ಯಕ್ರಮದ** ಕ್ವಿಜ್ ಮಾಸ್ಟರ್ ಡಾ. ನಾ**.** ಸೋಮೇಶ್ವರ ಇವರು ಮಾತನಾಡಿ ಇಂಜಿನೀಯರಿಂಗ್ ಸೇವೆಯನ್ನು ಸಲ್ಲಿಸಿ ಎಂದರು.

**ಶೈಕ್ಷಣಿಕ ಜೊತೆಗೆ** ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸ್ಪರ್ಧಾತ್ಮಕ ಯುಗದಲ್ಲಿ ನಾವೆಲ್ಲರೂ ಎಲ್ಲಾ ರಂಗದಲ್ಲೂ ಮುಂಚೂಣಿಯಲ್ಲಿ ಭಾಗವಹಿಸಲು ಉತ್ಸಾಹ ಇರಬೇಕು ಎಂದು ತಿಳಿಸಿದರು. ಇಂಜಿನೀಯರಿಂಗ್ ಪದವಿ ಪಡೆದ ನಂತರ ರಾಜ್ಯ ಹಾಗೂ ದೇಶಗಳ ಅಭಿವೃದ್ಧಿಗೆ ಸಹಕಾರಿಯಾಗೊ ಕೆಲಸ ನಿರ್ವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಆರ್ ಟಿ ದ್ಯಾವೇಗೌಡರು ವಹಿಸಿ ಮಾತಾನಾಡಿದ ಅವರು ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಇಂಜಿನೀಯರಿಂಗ್ ವಿದ್ಯಾಬ್ಯಾಸ ಮುಗಿಸಿ ದೇಶ ವಿದೇಶಗಳಲ್ಲಿ ಆನೇಕರು **ಉದ್ಯೋಗದಲ್ಲಿದ್ದಾರೆ.** ನಮ್ಮ ಕಾಲೇಜಿನಲ್ಲಿ ಉತ್ತಮ ಶಿಕ್ಷಣ ನೀಡಲಾಗುತ್ತಿದೆ ಎಂದು ತಿಳಿಸಿದರು

ಇದೇ ಸಂದರ್ಭದಲ್ಲಿ ಕಾಲೇಜಿನ 1983 ನೇ ಬ್ಯಾಚ್ನ ಹಳೆ ವಿದ್ಯಾರ್ಥಿಗಳು ಪ್ರತಿ ವರ್ಷ ಅತಿ ಹೆಚ್ಚು ಅಂಕ ಪಡೆದ 7 ವಿಭಾಗದ 7 ವಿದ್ಯಾರ್ಥಿಗಳಿಗೆ ಕಾರ್ಯಕ್ರಮದಲ್ಲಿ ಟ್ಯಾಬ್ ಮತ್ತು ಸರ್ಟಿಫಿಕೇಟ್ ನೀಡಲಾಯಿತು,

ಸರಣ್‌ದೀಪ ಸಿಂಗ್ ಮೇಮೋರಿಯಲ್ ಬ್ಯಾಡ್ಮಿಂಟನ್ ಕಪ್ ಅವಾರ್ಡ್ 2 ವಿದ್ಯಾರ್ಥಿಗಳಿಗೆ 5000 ದಂತೆ ನೀಡಲಾಯಿತು . ಎಂ ಫೌಂಡೇಶನ್ ವತಿಯಿಂದ ಬೆಸ್ಟ್ ಔಟ್ ಗೋಹೀಂಗ್ ಸ್ಟೂಡೆಂಟ್ ಒಬ್ಬ ವಿದ್ಯಾರ್ಥಿಗೆ 15000 ರೂಗಳನ್ನು ನೀಡ ಲಾಯಿತು.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಸಹಕಾರ್ಯದರ್ಶಿ ಡಾ .ಡಿ .ಸಿ. ಅರವೀಂದ್, ನಿರ್ದೇಶಕರಾದ ಚೌಡುವಳ್ಳಿ ಜಗದೀಶ್, ಡಿ .ಬಿ. ಹೇಮಂತ್ ಕುಮಾರ್, ಗುರುಮೂರ್ತಿ, ಮಲೆನಾಡು ಇಂಜಿನೀಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ .ಎ .ಜೆ. ಕೃಷ್ಣಯ್ಯ, ಮಲೆನಾಡು ಇಂಜಿನೀಯರಿಂಗ್ ಕಾಲೇಜಿನ ನಿರ್ದೇಶಕ ರಾದ ಡಾ .ಎಸ್. ಪ್ರದೀಪ್. ಕಾಲೇಜಿನ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ ಹೆಚ್ ಎಸ್ ನರಸಿಂಹನ್. ವಿದ್ಯಾರ್ಥಿ ಕ್ಲಬ್ ಅಧ್ಯಕ್ಷರು.ಹಾಗೂ ಪದಾಧಿಕಾರಿಗಳು ವೇದಿಕೆಯಲ್ಲಿದ್ದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ನೌಕರರು ಭಾಗವಹಿಸಿದ್ದರು.

ಕಾಲೇಜಿನ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಈ ಸಾರಿ. ಕಂಪ್ಯೂಟರ್ ಸೈನ್ಸ್ ಇಂಜಿನೀಯರಿಂಗ್ ವಿಭಾಗದ ವಿದ್ಯಾರ್ಥಿಗಳು. ಟ್ರೋಫಿ ಗೆಲುವು ಪಡೆದರು.


Arvind